**ಇಂದು ದಿನಾಂಕಃ 18-07-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿ ಪರವಾಗಿ ಶ್ರೀ ಎನ್.ಸಿ.ಹೆಚ್. ವಕೀಲರಿಂದಃ-**

ನನ್ನ ತಂದೆ ಶಾಮರಾವ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರು ಶೇಶಮ್ಮ ಮತ್ತು ಹೇಮಾವತಿ ಎಂದರೆ ಸರಿ. ಶೇಶಮ್ಮ ರವರ ಮಗ ವಾದಿ ಎಂದರೆ ಸರಿ. ನಾನು ಹೇಮಾವತಿ ರವರ ಮಗ ಎಂದರೆ ಸರಿ. ನನ್ನ ತಂದೆಗೆ ಹಿರಿಯರಿಂದ ಬಹಳಷ್ಟು ಜಮೀನುಗಳು ಬಂದಿವೆ ಎಂದರೆ ಸರಿ. ಎಲ್ಲಾ ಜಮೀನುಗಳಲ್ಲಿ ಪಾಲು ಆಗಿವೆ ಎಂದರೆ ಸರಿ. ಪಾಲು ಮೌಖಿಕವಾಗಿ ಆಗಿತ್ತು ಮತ್ತು ಆ ಸಮಯಕ್ಕೆ ನಮ್ಮ ಕುಟುಂಬದವರು ಮಾತ್ರ ಇದ್ದರು. ಪಾಲು ಆಗುವ ಸಮಯಕ್ಕೆ ನಮ್ಮ ಹತ್ತಿರ ಸ್ವಂತ ಒಕ್ಕಲುತನ ಇತ್ತು ಎಂದರೆ ಸರಿ. ಉಮೇಶ ತಂದೆ ಡಾಕು ರವರು ನಮ್ಮ ಹೊಲದಲ್ಲಿ ಪಾಲು ಮಾಡಿದ್ದು ಇರುತ್ತದೆ ಮತ್ತು ನಮ್ಮ ಹೊಲದಲ್ಲಿ ದುಡಿಮೆ ಮಾಡಿರುತ್ತಾನೆ ಎಂದರೆ ಸರಿ. ಪಾಲು ಮಾಡುವ ಸಮಯಕ್ಕೆ ಉಮೇಶ ರವರು ಸಹ ಇದ್ದರು ಎಂದರೆ ಸರಿ.

ಪಾಲು ಆಗುವ ಸಮಯಕ್ಕೆ ವಾದಿಗೆ ಎಷ್ಟು ಜಮೀನು ಹೋಗಿತ್ತು, ತಂದೆ-ತಾಯಿಗೆ ಎಷ್ಟು ಜಮೀನು ಹೋಗಿತ್ತು ಮತ್ತು ನಮಗೆ ಎಷ್ಟು ಜಮೀನು ಬಂದಿತ್ತು ಎಂದು ಹೇಳಲು ಬರುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ಪಾಲಿಗೆ ಬಂದಿರುವುದು ಮಾತ್ರ ಹೇಳಲು ಬರುತ್ತದೆ ಎಂದು ನುಡಿಯುತ್ತಾರೆ.

ದಾವಾ ಜಮೀನಿನ ಸರ್ವೆ ನಂ. ಏನು ಎಂದು ಪ್ರಶ್ನಿಸಿದಾಗ ಸಾಕ್ಷಿ ಸರ್ವೆ ನಂ. 4 ಮತ್ತು ಸರ್ವೆ ನಂ. 72 ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ. 4/1 ರಲ್ಲಿರುವ 14 ಎಕರೆ ಜಮೀನು ನನ್ನ ತಂದೆ-ತಾಯಿ ಉಪಜೀವನಕ್ಕಾಗಿ ಬಿಟ್ಟಿತ್ತು ಎಂದರೆ ಸರಿಯಲ್ಲ. ಪಾಲು ಆಗುವ ಸಮಯಕ್ಕೆ ನಮ್ಮ ತಂದೆ-ತಾಯಿ ತಮಗಾಗಿ ಜಮೀನು ಸರ್ವೆ ನಂ. 4 ರಲ್ಲಿ ಇಟ್ಟುಕೊಂಡಿದ್ದರು. ನನ್ನ ತಂದೆ-ತಾಯಿ ಜೀವಿತ ಸಮಯದಲ್ಲಿ ಸರ್ವೆ ನಂ. 4 ರ ಜಮೀನು ಉಪಭೋಗ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ-ತಾಯಿ ಮೃತಪಟ್ಟ ನಂತರ ಸರ್ವೆ ನಂ. 4/1 ರಲ್ಲಿರುವ 14 ಎಕರೆ ಜಮೀನಿನಲ್ಲಿ 5 ಎಕರೆ ಜಮೀನು ವಾದಿಗೆ ಹೋಗಬೇಕು ಎಂದು ಮಾತು ಆಗಿತ್ತು ಎಂದರೆ ಸರಿಯಲ್ಲ. ಯಾವ ಇಸವಿಯಲ್ಲಿ ಪಾಲು ಆಗಿದೆ ಎಂದು ನನಗೆ ಹೇಳಲು ಬರವುದಿಲ್ಲ. ಆಗ ನನ್ನ ವಯಸ್ಸು 6-7 ವರ್ಷವಾಗಿತ್ತು. ಸಾಕ್ಷಿ ಪುನಃ ಮುಂದುವರೆದು ಆಗ ನಾನು ಗುಲ್ಬರ್ಗಾ ಶಾಲೆಯಲ್ಲಿ ಇದೆ ಎಂದು ನುಡಿಯುತ್ತಾರೆ. ಪಾಲು ಆಗುವ

ಸಮಯಕ್ಕೆ ನನಗೆ ಕರೆಸಿಲ್ಲ ಎಂದರೆ ಸರಿ. ನಾನು ಚಿಕ್ಕವನಿದ್ದ ಕಾರಣ ಮತ್ತು ನನಗೆ ಪಾಲು ಆಗುವ ಸಮಯಕ್ಕೆ ಕರೆಸದೇ ಇರುವ ಕಾರಣ ಪಾಲು ಮಾಡುವ ಸಮಯಕ್ಕೆ ಏನು ಮಾತು ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ವರ್ಗಾವಣೆಗಾಗಿ ಅರ್ಜಿಯನ್ನು ಸಲ್ಲಿಸುವಾಗ ನಾವು ವಾದಿಯಿಂದ ಅನುಮತಿ ಪಡೆದಿಲ್ಲ. ನನ್ನ ಅರ್ಜಿಗೆ ವಾದಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಆದರೂ ಸಹ ನಾನು ಪ್ರಭಾವ ಬೀರಿ ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವರ್ಗಾವಣೆ ಆದ ಕಾರಣ ವಾದಿ ಈ ದಾವೆಯನ್ನು ಸಲ್ಲಿಸಿದ್ದಾನೆ ಎಂದರೆ ಸರಿ. ವಾದಿಗೆ ಮಹೇಂದ್ರ ಎಂಬ ತಮ್ಮ ಇದ್ದಾನೆ ಎಂದರೆ ಸರಿ. ನನಗೆ ಒಬ್ಬ ಅಣ್ಣ ಹಾಗೂ ತಂಗಿ ಇದ್ದು ಅವರಲ್ಲಿ ಅಣ್ಣ ಮೃತಪಟ್ಟಿದ್ದಾನೆ ಎಂದರೆ ಸರಿ. ಸರ್ವೆ ನಂ. 4/1 ರಲ್ಲಿ ಮಹೇಂದ್ರ ರವರಿಗಾಗಲೀ, ಮಲ್ಲಿಕಾರ್ಜುನ ರವರ ವಂಶಸ್ಥರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಪಾಲು ಆಗುವ ಸಮಯಕ್ಕೆ 4/1 ರಲ್ಲಿ 14 ಎಕರೆ ಜಮೀನಿನಲ್ಲಿ 9 ಎಕರೆ ನನ್ನ ಪಾಲಿಗೆ ಇದ್ದು ಉಳಿದ 5 ಎಕರೆ ಜಮೀನು ವಾದಿಗೆ ಇದೆ ಎಂದು ಮಾತು ಆಗಿತ್ತು ಎಂದರೆ ಸರಿಯಲ್ಲ. ನಾನು ಸರ್ವೆ ನಂ. 4 ರಲ್ಲಿ 9 ಎಕರೆ ಜಮೀನಿನಲ್ಲಿ ಕಬ್ಜೆಯಲ್ಲಿದ್ದು ಉಳಿದ 5 ಎಕರೆ ಜಮೀನಿನಲ್ಲಿ ವಾದಿ ಕಬ್ಜೆಯಲ್ಲಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಸದರಿ ಜಮೀನಿನಲ್ಲಿ ಸಾಗುವಳಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಸಾಗುವಳಿ ಮಾಡಿಲ್ಲಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

ಸರ್ವೆ ನಂ. 4/1 ರ 5 ಎಕರೆ ಜಮೀನಿನ ಮಾಲೀಕ ಮತ್ತು ಕಬ್ಜೆದಾರ ವಾದಿ ಇದ್ದಾರೆ ಎಂದರೆ ಸರಿಯಲ್ಲ. 5 ಎಕರೆ ಜಮೀನಿನಲ್ಲಿ ತಕರಾರು ಮಾಡುವ ಅಧಿಕಾರಿ ನಿಮಗೆ ಇಲ್ಲ ಎಂದರೆ ಸಾಕ್ಷಿ ಅದರಲ್ಲಿ ಸಹ ನಾನೇ ಮಾಲೀಕನಿದ್ದೇನೆ ಎಂದು ನುಡಿಯುತ್ತಾರೆ. ವಾದಿಯ ಜಮೀನನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**